ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ಕನ್ನಡ

2026–2027

## ವಿದ್ಯಾರ್ಥಿ ಅಭ್ಯಾಸ ಪುಸ್ತಕ

@KTBS NOT TO BE REPUBLISHED

10

ಹತ್ತನೇ ತರಗತಿ

ಸಮಗ್ರ ಶಿಕ್ಷಣ– ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ

| | | |
|---|---|---|
| **ಶ್ರೀಮತಿ ವಿ. ರಶ್ಮಿ ಮಹೇಶ್** ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಕರ್ನಾಟಕ ಸರ್ಕಾರ | **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ<br>ನೃಪತುಂಗ ರಸ್ತೆ ಬೆಂಗಳೂರು | **ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು |
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು, ಗುಣಮಟ್ಟ<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | **ಶ್ರೀ ಹೆಚ್.ಎನ್. ಗೋಪಾಲಕೃಷ್ಣ**<br>ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ<br>ಬೆಂಗಳೂರು | **ಶ್ರೀ ಸಿ.ಆರ್. ನಾಗರಾಜಯ್ಯ**<br>ಪ್ರಾಂಶುಪಾಲರು ಹಾಗೂ<br>ಉಪನಿರ್ದೇಶಕರು (ಅಭಿವೃದ್ಧಿ)<br>ಡಯಟ್ ಮೈಸೂರು |

## ಸಹಕಾರ

| | |
|---|---|
| **ಶ್ರೀ ಬಿ.ಎಸ್. ಜಗದೀಶ್ವರ**<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀಮತಿ ಮಂಗಳ ಜಿ.**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ರಚನಾ ತಂಡ (2024–2025)

| | | |
|---|---|---|
| **ಶ್ರೀ ರವೀಶ್ ಕುಮಾರ್.ಬಿ**<br>ನಿವೃತ್ತ ಶಿಕ್ಷಕರು, ರಾಜ್ಯ ಸಂಪನ್ಮೂಲ ವ್ಯಕ್ತಿಗಳು,<br>ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಸದಸ್ಯರು,<br>ಮೈಸೂರು ಜಿಲ್ಲೆ. | **ಶ್ರೀ ಮಹದೇವಪ್ರಸಾದ್.ಹು.ವ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಪುಟ್ಟೇಗೌಡನಹುಂಡಿ, ಮೈಸೂರು ತಾ॥<br>ಮೈಸೂರು ಜಿಲ್ಲೆ. | **ಶ್ರೀ ಕೆಂಪರಾಜು.ಕೆ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಬೆಟ್ಟದಪುರ, ಪಿರಿಯಾಪಟ್ಟಣ ತಾ॥<br>ಮೈಸೂರು ಜಿಲ್ಲೆ. |
| **ಶ್ರೀ ವೆಂಕಟನಾಯಕ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಜಿ.ಬಿ.ಸರಗೂರು, ಹೆಚ್.ಡಿ.ಕೋಟೆ ತಾ॥<br>ಮೈಸೂರು ಜಿಲ್ಲೆ. | **ಶ್ರೀ ರಂಗಸ್ವಾಮಿ.ಬಿ.ಆರ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ವ್ಯಾಸರಾಜಪುರ, ಟಿ.ನರಸೀಪುರ ತಾ॥<br>ಮೈಸೂರು ಜಿಲ್ಲೆ. | **ಶ್ರೀಮತಿ ಜಯಶ್ರೀ.ಹೆಚ್.ಕೆ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು<br>(ಪ್ರೌಢಶಾಲಾ ವಿಭಾಗ), ಹೊಮ್ಮರಗಳ್ಳಿ,<br>ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ. |

| | |
|---|---|
| **ಶ್ರೀ ದೇವರಾಜ.ಎಂ.ಜೆ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಅತ್ತಿಗೋಡು,<br>ಪಿರಿಯಾಪಟ್ಟಣ ತಾ॥ ಮೈಸೂರು ಜಿಲ್ಲೆ. | **ಶ್ರೀ ನವೀನ್ ಕುಮಾರ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಧರ್ಮಾಪುರ,<br>ಹುಣಸೂರು ತಾ॥ ಮೈಸೂರು ಜಿಲ್ಲೆ. |

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

| | |
|---|---|
| **ಶ್ರೀ ಆರ್.ಡಿ.ರವೀಂದ್ರ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ,<br>ಕೊಪ್ಪ ತಾ॥, ಚಿಕ್ಕಮಗಳೂರು ಜಿಲ್ಲೆ. | **ಶ್ರೀ ವೆಂಕಟನಾಯಕ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಜಿ.ಬಿ.ಸರಗೂರು,<br>ಹೆಚ್.ಡಿ.ಕೋಟೆ ತಾ॥ ಮೈಸೂರು ಜಿಲ್ಲೆ. |

| | | |
|---|---|---|
| **ಶ್ರೀ ರಂಗಸ್ವಾಮಿ.ಬಿ.ಆರ್**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ವ್ಯಾಸರಾಜಪುರ, ಟಿ.ನರಸೀಪುರ ತಾ॥<br>ಮೈಸೂರು ಜಿಲ್ಲೆ. | **ಶ್ರೀ ಮಹದೇವಪ್ರಸಾದ್.ಹು.ವ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಪುಟ್ಟೇಗೌಡನಹುಂಡಿ, ಮೈಸೂರು ತಾ॥<br>ಮೈಸೂರು ಜಿಲ್ಲೆ. | **ಶ್ರೀಮತಿ ಜಯಶ್ರೀ.ಹೆಚ್.ಕೆ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು<br>(ಪ್ರೌಢಶಾಲಾ ವಿಭಾಗ), ಹೊಮ್ಮರಗಳಿ<br>ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ. |

## ಸಮನ್ವಯ

- **ಶ್ರೀಮತಿ ನಾಗಮಣಿ ಎಂ.** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು
- **ಶ್ರೀಮತಿ ಶಿವಮ್ಮ,** ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ.
- **ಶ್ರೀ ಕೆ.ವಿ.ಸುರೇಶ್,** ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀಮತಿ ಬಿ.ಎನ್.ನಳಿನಾಕ್ಷಿ,** ಉಪನ್ಯಾಸಕರು, ಕಾರ್ಯಾನುಭವ ವಿಭಾಗ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀ ಶಿವಶಂಕರಯ್ಯ,** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.

**ಬೆಂಬಲ ಟ್ರಾನ್ಸ್ ಫಾರ್ಮ್ ಸ್ಕೂಲ್ಸ್,**

@KTBS NOT TO BE REPUBLISHED

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥ ಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು (learning gaps) ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ (foundational) ಮತ್ತು ಪೂರ್ವ–ಅಗತ್ಯ (ಠಿಡಿಜಡಿಜಡಣ್ಣುಣಜ) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.
ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು **'ವಿದ್ಯಾರ್ಥಿ ಅಭ್ಯಾಸ ಪುಸ್ತಕ'** (Student Activity Book - SAB) ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ–ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ :

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

@KTBS
NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬುನಾದಿ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 1 | ವರ್ಣಮಾಲೆ ತಿಳಿಯೋಣ | 01 |
| 2 | ನಾಮಪದ, ಸರ್ವನಾಮ | 03 |
| 3 | ವಿಭಕ್ತಿ ಪ್ರತ್ಯಯಗಳು ಮತ್ತು ಕಾಲಗಳು | 05 |
| 4 | ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ | 08 |
| 5 | ಸಂಧಿಗಳು | 10 |
| 6 | ಸಮಾಸಗಳು ಮತ್ತು ತತ್ಸಮ-ತದ್ಭವಗಳು | 12 |
| 7 | ವಾಕ್ಯ ಪ್ರಭೇದಗಳು | 15 |
| 8 | ಅಲಂಕಾರಗಳು | 17 |
| 9 | ಛಂದಸ್ಸು | 19 |
| 10 | ಪತ್ರ ಬರೆಯೋಣ | 22 |


@KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬೆಂಬಲಿತ ಕಲಿಕೆಯ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 01 | ನಾಮಪದಗಳು | 24 |
| 02 | ಸಂಧಿಗಳು | 26 |
| 03 | ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ | 30 |
| 04 | ಅವ್ಯಯಗಳು | 32 |
| 05 | ಲೇಖನ ಚಿಹ್ನೆಗಳು | 34 |
| 06 | ವಾಕ್ಯ ಪ್ರಕಾರಗಳು | 36 |
| 07 | ಛಂದಸ್ಸು 1 | 38 |
| 08 | ಅಲಂಕಾರಗಳು | 41 |
| 09 | ಕ್ರಿಯಾ ಪದಗಳು | 45 |
| 10 | ವಿಭಕ್ತಿ ಪ್ರತ್ಯಯಗಳು | 47 |
| 11 | ಪತ್ರ ಬರೆಯೋಣ 1 | 49 |
| 12 | ಪತ್ರ ಬರೆಯೋಣ 2 | 52 |
| 13 | ಛಂದಸ್ಸು 2 | 55 |
| 14 | ಸಮಾಸಗಳು | 58 |
| 15 | ಕಥೆ–ನಾಟಕ | 61 |
| 16 | ಗಾದೆ ವಿಸ್ತರಿಸಿ ಬರೆಯೋಣ | 64 |
| 17 | ಪಠ್ಯದಲ್ಲಿನ ಪಾತ್ರಗಳ ವಿಶ್ಲೇಷಣೆ ಸಂಭಾಷಣೆ | 67 |
| 18 | ಸಾರಾಂಶ ಬರೆಯೋಣ | 70 |
| 19 | ಕವಿ–ಕೃತಿ ಬರೆಯೋಣ | 73 |
| 20 | ಪ್ರಬಂಧ ರಚಿಸೋಣ | 78 |
| ಕ್ರೋಢೀಕರಣ ಹಂತ | | |
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 01 | ಕಲಿಕಾ ಅಭ್ಯಾಸ 1 | 80 |
| 02 | ಕಲಿಕಾ ಅಭ್ಯಾಸ 2 | 85 |
| 03 | ಕಲಿಕಾ ಅಭ್ಯಾಸ 3 | 90 |
| 04 | ಕಲಿಕಾ ಅಭ್ಯಾಸ 4 | 95 |
| 05 | ಕಲಿಕಾ ಅಭ್ಯಾಸ 5 | 99 |
| 06 | ಕಲಿಕಾ ಅಭ್ಯಾಸ 6 | 104 |


@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 1

# ವರ್ಣಮಾಲೆ ತಿಳಿಯೋಣ

55A7X6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ಕನ್ನಡ ವರ್ಣಮಾಲೆಯಲ್ಲಿನ ಸ್ವರ, ವ್ಯಂಜನ, ಯೋಗವಾಹ, ಗುಣಿತಾಕ್ಷರ, ಸಂಯುಕ್ತಾಕ್ಷರಗಳನ್ನು ಗುರುತಿಸುವರು

**ಚಟುವಟಿಕೆ 1** : ಈ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಉದಾಹರಣೆಯಂತೆ ಗುರುತಿಸಿ ಬರೆಯಿರಿ

| | | | | | |
|---|---|---|---|---|---|
| ಐದಾರು | ಐ | ಅತ್ಯಂತ | | ಓಲಗಕ್ಕೆ | |
| ಆನಂದ | | ಇಬ್ಬರಿಂದ | | ಏರಿಳಿತ | |
| ಉಬ್ಬಸ | | ಊರೂರು | | ಈಶ್ವರ | |
| ಎಲೆಗಳು | | ಋಷಿಮುನಿ | | ಒಂದರಿಂದ | |

**ಚಟುವಟಿಕೆ 2** : ಈ ಪದಗಳಲ್ಲಿರುವ ವರ್ಗೀಯ ಮತ್ತು ಅವರ್ಗೀಯ ವ್ಯಂಜನಾಕ್ಷರಗಳನ್ನು ಗುರುತಿಸಿ ಬರೆಯಿರಿ.

ಉತ್ತರ, ಬಾಲಕ, ಅಪಾರ, ಗಮನ, ಅವನು, ತರಬೇತಿ, ಆಟಗಾರ, ಸರಮಾಲೆ.

| ಪದ | ವರ್ಗೀಯ ವ್ಯಂಜನ | ಅವರ್ಗೀಯ ವ್ಯಂಜನ | ಪದ | ವರ್ಗೀಯ ವ್ಯಂಜನ | ಅವರ್ಗೀಯ ವ್ಯಂಜನ |
|---|---|---|---|---|---|
| ಉತ್ತರ | ತ | ರ | | | |
| | | | | | |
| | | | | | |
| | | | | | |

NOT TO BE REPUBLISHED @KTBS

**ಚಟುವಟಿಕೆ 3** : ಅನುಸ್ವಾರ ವಿಸರ್ಗ ಸಹಿತ ಪದಗಳನ್ನು ಗುರುತು ಮಾಡಿ.

1. ಕೆಂಪಾಗಿ 2. ಸ್ವತ: 3. ಚಂಪಕ 4. ಭವಿಷ್ಯ 5. ರಂಜಕ 6. ಪುನ:

7. ಹೊಂದಿಕೆ 8. ದು:ಖ 9. ಗಂಟುಮೂಟೆ 10. ಎಂಬಂತೆ 11. ಅಂತ:ಕರಣ 12. ಅಂತರ

| | | | | | |
|---|---|---|---|---|---|
| ಅನುಸ್ವಾರ ಪದಗಳು | | | | | |
| ವಿಸರ್ಗ ಪದಗಳು | | | | | |

**ಚಟುವಟಿಕೆ 4 :** ಈ ಕೆಳಗಿನ ಪದಗಳಲ್ಲಿ ಅನುನಾಸಿಕ ಅಕ್ಷರಗಳನ್ನು ಆರಿಸಿ ಬರೆಯಿರಿ.

| ಪದ | ಅನುನಾಸಿಕ ಅಕ್ಷರ | ಪದ | ಅನುನಾಸಿಕ ಅಕ್ಷರ | ಪದ | ಅನುನಾಸಿಕ ಅಕ್ಷರ |
|---|---|---|---|---|---|
| ಗುಣಕ | | ಅಭಿಮಾನ | | ಜಾಣ | |
| ಬಂಧನ | | ಕೃತಜ್ಞ | | ಮನೋಹರ | |
| ಕರ್ಮ | | ಶಮಂತಕ | | ಸಂಜ್ಞಾ | |

**ಚಟುವಟಿಕೆ 5 :** ಈ ಪದಗಳ ಗುಣಿತಾಕ್ಷರಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

| ಪದ | ಗುಣಿತಾಕ್ಷರ |
|---|---|
| ಕರ್ನಾಟಕ | ಕ್+ಅ, ರ್+ನ್+ಆ, ಟ್+ಅ, ಕ್+ಅ |
| ಮಹದೇಶ್ವರ | |
| ಚಂದ್ರಮೌಳಿ | |
| ಜಟಿಲೇಂದ್ರ | |
| ತರ್ಕಬದ್ಧ | |

@KTBS NOT TO BE REPUBLISHED

# ನಾಮಪದಗಳು ಮತ್ತು ಸರ್ವನಾಮಗಳು

Y7X1F7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ನಾಮಪದ ಮತ್ತು ಸರ್ವನಾಮಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸುವರು.

**ಚಟುವಟಿಕೆ 1 :** ಕೆಳಗಿನ ಪದಗಳನ್ನು ವರ್ಗೀಕರಿಸಿ ಬರೆಯಿರಿ.

ಮನೆ, ಶಂಕರ, ವಿದ್ಯಾರ್ಥಿ, ನದಿ, ಚಾಮುಂಡಿ, ಪರ್ವತ, ಅರ್ಜುನ, ಸಮುದ್ರ, ಕಲ್ಲು, ಶಿಕ್ಷಕ, ರೈತ, ಮರ, ಬೆಟ್ಟ, ತೆಂಗು, ಶೆಟ್ಟಿ, ಸೈನಿಕ, ಮೈಸೂರು, ವೈದ್ಯ, ಗುಂಡ್ಲುಪೇಟೆ, ಕುರುಡ, ಪ್ರೇಕ್ಷಿತ, ಭೂಮಿ, ರೋಗಿ.

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| 1. | 1. | 1. |
| 2. | 2. | 2. |
| 3. | 3. | 3. |
| 4. | 4. | 4. |
| 5. | 5. | 5. |
| 6. | 6. | 6. |
| 7. | 7. | 7. |
| 8. | 8. | 8. |
| 9. | 9. | 9. |

@KTBS NOT TO BE REPUBLISHED

**ಚಟುವಟಿಕೆ 2 :** ಮೊದಲೆರಡು ಪದಗಳಿಗಿರುವ ಸಂಬಂಧಿಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೇ ಪದ ಬರೆಯಿರಿ.

1. ಪಾರ್ವತಿ : ಅಂಕಿತ ನಾಮ :: ಬೆಟ್ಟ : **ರೂಢನಾಮ**
2. ಎರಡು : ಸಂಖ್ಯಾವಾಚಕ :: ನೋಟ : ______________
3. ಪೂರ್ವ : ದಿಗ್ವಾಚಕ :: ಆರನೆಯ : ______________
4. ಹೆಳವ : ಅನ್ವರ್ಥ ನಾಮ :: ಅಷ್ಟು : ______________
5. ಬಸವಣ್ಣ : ಅಂಕಿತನಾಮ :: ವಿಜ್ಞಾನಿ : ______________
6. ಕೆಂಪನೆಯ : ಗುಣವಾಚಕ :: ಹತ್ತುಕೋಟಿ : ______________
7. ಆಟ : ಭಾವನಾಮ :: ಪಡುವಣ : ______________
8. ವಿದ್ವಾಂಸ : ಅನ್ವರ್ಥನಾಮ :: ವಿವೇಕಾನಂದ :______________

**ಚಟುವಟಿಕೆ 3** : ಈ ಗದ್ಯಭಾಗವನ್ನು ಓದಿ ಅದರಲ್ಲಿರುವ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ:

ಅಭಿಮನ್ಯು ಓದಿನಲ್ಲಿ ಬಹಳ ಜಾಣ. ಅವನನ್ನು ಕಂಡರೆ ಶಿಕ್ಷಕರಿಗೆಲ್ಲಾ ಬಹಳ ಅಚ್ಚುಮೆಚ್ಚು. ಅವರು ಆತನಿಗೆ ಓದಿನ ವಿಚಾರದಲ್ಲಿ ಬಹಳ ಸಹಾಯ ಮಾಡುತ್ತಿದ್ದರು. ಅವನು ಸ್ನೇಹಿತರನ್ನು ತನ್ನ ಸೋದರ ಸೋದರಿಯೆಂದು ಭಾವಿಸಿದ್ದನು. ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಉತ್ತಮವಾಗಿ ಭಾಗವಹಿಸುತ್ತಿದ್ದನು. "ನಾನು ಶಾಲೆಗೆ ಕೀರ್ತಿ ತರಬೇಕೆಂದು" ಹಂಬಲಿಸುತ್ತಿದ್ದನು. ಅದಕ್ಕಾಗಿ ಅವನು ಪ್ರತಿದಿನ ಮುಂಜಾನೆಯೇ ಎದ್ದು ಓದಿಕೊಳ್ಳುತ್ತಿದ್ದನು.ಹೀಗೆ ಅವನು ಬಹಳ ಶ್ರಮಪಡುತ್ತಿದ್ದನು.

**ಸರ್ವನಾಮಗಳು :**

| | | | |
|---|---|---|---|
| | | | |
| | | | |

**ಚಟುವಟಿಕೆ 4** : ಅ ಪಟ್ಟಿಯನ್ನು ಬ ಪಟ್ಟಿಯೊಂದಿಗೆ ಹೊಂದಿಸಿ ಉತ್ತರಕ್ಕಾಗಿ ಕೊಟ್ಟಿರುವ ಚೌಕದಲ್ಲಿ ಬರೆಯಿರಿ:

| ಅ ಪಟ್ಟಿ | ಉತ್ತರಗಳು | ಬ ಪಟ್ಟಿ |
|---|---|---|
| 1.ದಿಗ್ವಾಚಕಗಳು | | ಸಂಖ್ಯೆಯನ್ನು ಸೂಚಿಸುವ ಪದಗಳು. |
| 2.ಗುಣವಾಚಕಗಳು | | ವಸ್ತುಗಳ ಪ್ರಮಾಣವನ್ನು ತಿಳಿಸಲು ಬಳಸುವ ಪದಗಳು. |
| 3.ಸಂಖ್ಯಾವಾಚಕ | | ವ್ಯಕ್ತಿ/ವಸ್ತುವಿನ ಗುಣವನ್ನು ಸೂಚಿಸುವ ಪದಗಳು. |
| 4.ಪರಿಮಾಣವಾಚಕ | | ಸಂಖ್ಯೆಗಳಿಗೆ ನೆಯ ಮತ್ತು ನೇ ಗಳನ್ನು ಸೇರಿಸಿ ಹೇಳುವ ಪದಗಳು |
| 5.ಸಂಖ್ಯೇಯವಾಚಕ | | ದಿಕ್ಕುಗಳ ಹೆಸರನ್ನು ಸೂಚಿಸುವ ಪದಗಳು. |

@KTBS NOT TO BE REPUBLISHED

# ವಿಭಕ್ತಿ ಪ್ರತ್ಯಯಗಳು ಮತ್ತು ಕಾಲಗಳು

E3P3B2
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ನಾಮಪದ ಮತ್ತು ಸರ್ವನಾಮಗಳ ಕುರಿತ ಪ್ರಶ್ನೆಗಳಿಗೆ ಉತ್ತರಿಸುವರು.

***ನಾಮಪ್ರಕೃತಿಗಳಿಗೆ ಬೇರೆ ಬೇರೆ ಅರ್ಥದಲ್ಲಿ ಸೇರಿ ನಾಮಪದಗಳನ್ನಾಗಿ ಮಾಡುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.**

## ವಿಭಕ್ತಿ ಪ್ರತ್ಯಯಗಳು.

| ಕ್ರಮ ಸಂಖ್ಯೆ | ವಿಭಕ್ತಿ ಪ್ರತ್ಯಯ | ನಾಮ ಪ್ರಕೃತಿ | ವಿಭಕ್ತಿ ಪ್ರತ್ಯಯ | ನಾಮಪದ |
|---|---|---|---|---|
| 1 | ಪ್ರಥಮ | ಶಾಲೆ | ಉ | ಶಾಲೆಯು |
| 2 | ದ್ವಿತೀಯ | ಶಾಲೆ | ಅನ್ನು | ಶಾಲೆಯನ್ನು |
| 3 | ತೃತೀಯ | ಶಾಲೆ | ಇಂದ | ಶಾಲೆಯಿಂದ |
| 4 | ಚತುರ್ಥಿ | ಶಾಲೆ | ಗೆ,ಕೆ,ಇಗೆ | ಶಾಲೆಗೆ |
| 5 | ಪಂಚಮಿ | ಶಾಲೆ | ದೆಸೆಯಿಂದ | ಶಾಲೆಯ ದೆಸೆಯಿಂದ |
| 6 | ಷಷ್ಠಿ | ಶಾಲೆ | ಅ | ಶಾಲೆಯ |
| 7 | ಸಪ್ತಮಿ | ಶಾಲೆ | ಅಲ್ಲಿ | ಶಾಲೆಯಲ್ಲಿ |

@KTBS NOT TO BE REPUBLISHED

**ಚಟುವಟಿಕೆ: 1:** ಕೆಳಕಂಡ ಗದ್ಯಭಾಗವನ್ನು ಓದಿ, ದಪ್ಪಕ್ಷರಗಳಲ್ಲಿ ಬರೆದಿರುವ ಪದಗಳನ್ನು ವಿಭಕ್ತಿ ಪಟ್ಟಿಯಲ್ಲಿ ಬರೆಯಿರಿ.

**ರಮೇಶನು ಶಾಲೆಯಿಂದ ಮನೆಗೆ** ಬಂದನು. **ತೋಟದಲ್ಲಿ** ಆಟವಾಡುತ್ತಿದ್ದ ಅವನ **ತಂಗಿಯ** ಜೊತೆ ಸೇರಿ **ಗಿಡಗಳಿಗೆ** ನೀರು ಹಾಕಿದನು. **ಗೀತಾಳ ದೆಸೆಯಿಂದ** ಮುರಿದು ಬಿದ್ದಿದ್ದ **ಸಸಿಯೊಂದಕ್ಕೆ** ಆರೈಕೆ ಮಾಡಿದನು. **ಗಿಡದ ರೆಂಬೆಯಲ್ಲಿ** ಇದ್ದ **ಹಕ್ಕಿಯ ಗೂಡಿನಲ್ಲಿ ಮೊಟ್ಟೆಗಳನ್ನು** ಕಂಡು ಆಶ್ಚರ್ಯಗೊಂಡರು. ಅಲ್ಲಿಂದ ಓಡೋಡಿ ಬಂದು ಆಗ ತಾನೇ **ಹೊಲದಿಂದ** ಬರುತ್ತಿದ್ದ ಅಪ್ಪನಿಗೆ ವಿಷಯ ತಿಳಿಸಿದರು. ಅಪ್ಪನು ಮಕ್ಕಳಿಗೆ ಗೂಡನ್ನು ಮುಟ್ಟಬಾರದೆಂದು ತಿಳಿಸಿದರು.

| ಕ್ರಮ ಸಂಖ್ಯೆ | ವಿಭಕ್ತಿ ಪ್ರತ್ಯಯ | ನಾಮಪದ |
|---|---|---|
| 1 | ಪ್ರಥಮ | |
| 2 | ದ್ವಿತೀಯ | |
| 3 | ತೃತೀಯ | |
| 4 | ಚತುರ್ಥಿ | |
| 5 | ಪಂಚಮಿ | |
| 6 | ಷಷ್ಠಿ | |
| 7 | ಸಪ್ತಮಿ | |

## ಕಾಲಗಳು.

**ಕಾಲಗಳು** : ನಡೆದ , ನಡೆಯುತ್ತಿರುವ ಮತ್ತು ಮುಂದೆ ನಡೆಯುವ ಕ್ರಿಯೆಗಳನ್ನು ಸೂಚಿಸುವುದೇ ಕಾಲಗಳು.

ಇವುಗಳಲ್ಲಿ ಮೂರು ವಿಧ : **ಭೂತಕಾಲ, ವರ್ತಮಾನಕಾಲ, ಭವಿಷ್ಯತ್ ಕಾಲ.**

ಕ್ರಿಯಾಪದದ ಮೂಲರೂಪ–ಧಾತು. ಧಾತುಗಳಿಗೆ ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ.

**ಉದಾಹರಣೆಗೆ :** ಬರೆ (ಧಾತು)+ ಉತ್ತ(ಕಾಲಸೂಚಕ ಪ್ರತ್ಯಯ)+ಆನೆ(ಆಖ್ಯಾತ ಪ್ರತ್ಯಯ)= ಬರೆಯುತ್ತಾನೆ (ಕ್ರಿಯಾಪದ).

| **ಕಾಲಗಳು** | **ಕಾಲಸೂಚಕ ಪ್ರತ್ಯಯಗಳು** |
|---|---|
| ಭೂತಕಾಲ | ದ |
| ವರ್ತಮಾನಕಾಲ | ಉತ್ತ |
| ಭವಿಷ್ಯತ್ ಕಾಲ | ವ, ಉವ |

**ಚಟುವಟಿಕೆ 2** : ಕೆಳಗಿನ ಕ್ರಿಯಾಪದಗಳಿಗೆ ಮಾದರಿಯಂತೆ ಕಾಲಗಳನ್ನು ಬರೆಯಿರಿ.

@KTBS NOT TO BE REPUBLISHED

| **ಕ್ರಿಯಾಪದ** | **ಕಾಲ** |
|---|---|
| ಬರೆದನು | ಭೂತಕಾಲ |
| ಹಾಡುವಳು | |
| ನೋಡುತ್ತಿದೆ | |
| ಹೋರಾಡಿದರು | |
| ರಚಿಸಿದರು | |
| ಹುಡುಕುತ್ತಿದ್ದಾನೆ | |
| ಕುಣಿಯುವರು | |
| ಬರುತ್ತದೆ | |
| ಹೋದಳು | |

**ಚಟುವಟಿಕೆ 3 :** ಕೆಳಗಿನ ವಾಕ್ಯಗಳನ್ನು ಸೂಚನೆಯಂತೆ ಪರಿವರ್ತಿಸಿ ಬರೆಯಿರಿ.

1. ನಾನು ಕವನವನ್ನು ಬರೆಯುತ್ತೇನೆ.( ಭೂತಕಾಲಕ್ಕೆ ಪರಿವರ್ತಿಸಿ)

---

2. ಭೀಮನು ಮರವನ್ನು ಮುರಿದನು.( ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ)

---

3. ಗಿಳಿಯು ಹಣ್ಣನ್ನು ತಿನ್ನುವುದು. (ವರ್ತಮಾನಕಾಲಕ್ಕೆ ಪರಿವರ್ತಿಸಿ)

---

4. ಮಹಮ್ಮದನು ಗೀತೆಯನ್ನು ಹಾಡಿದನು. (ವರ್ತಮಾನಕಾಲಕ್ಕೆ ಪರಿವರ್ತಿಸಿ)

---

5. ಮೇರಿಯು ನಾಟಕದಲ್ಲಿ ಅಭಿನಯಿಸುವಳು.( ಭೂತಕಾಲಕ್ಕೆ ಪರಿವರ್ತಿಸಿ)

---

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 4

# ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ
N4T3I1

**ಕಲಿಕಾ ಫಲ :** ವಿದ್ಯಾರ್ಥಿಗಳು ದ್ವಿರುಕ್ತಿ, ಅನುಕರಣಾವ್ಯಯ ಮತ್ತು ಜೋಡುಪದಗಳನ್ನು ಗುರುತಿಸಲು ಹಾಗೂ ತಮ್ಮದೇ ಆದ ಉದಾಹರಣೆಗಳೊಂದಿಗೆ ಬಳಸುವರು.

1. ದ್ವಿರುಕ್ತಿ : ಒಂದು ವಿಶೇಷ ಅರ್ಥವನ್ನು ವ್ಯಕ್ತಪಡಿಸುವುದಕ್ಕೆ ಒಂದು ಪದವನ್ನು, ಒಂದು ವಾಕ್ಯವನ್ನು ಎರಡು ಬಾರಿ ಉಚ್ಚರಿಸುವ ಶಬ್ಧಗಳು ದ್ವಿರುಕ್ತಿ ಎನಿಸುತ್ತವೆ.

2. ಜೋಡುನುಡಿ : ಭಾಷೆಯನ್ನು ಬಳಸುವಾಗ ಒಂದರಜೊತೆಯಲ್ಲಿ ಎರಡು ಬೇರೆ ಬೇರೆ ಪದಗಳು ರೂಢಿಗತವಾಗಿ ಬಂದರೆ ಅವು ಜೋಡುನುಡಿಗಳೆನಿಸುತ್ತವೆ.

3. ಅನುಕರಣಾವ್ಯಯ : ನಿರ್ದಿಷ್ಟವಾದ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆಯೇ ಅನುಕರಣೆ ಮಾಡಿ ಹೇಳಿದರೆ ಅದು ಅನುಕರಣಾವ್ಯಯ ವೆನಿಸುತ್ತದೆ.

**ಚಟುವಟಿಕೆ 1** : ಕೊಟ್ಟಿರುವ ಪದಗಳನ್ನು ಓದಿಕೊಂಡು, ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿಗಳನ್ನು ವರ್ಗೀಕರಿಸಿ ಬರೆಯಿರಿ.

ಫಳಫಳ, ಬೇಗಬೇಗ, ತಿನ್ನುತಿನ್ನು, ಸರಸರ, ಸರಮಾಲೆ, ಓಡುಓಡು, ಬೇವುಬೆಲ್ಲ, ಅಚ್ಚುಮೆಚ್ಚು, ಗಟಗಟ, ಸಾಕುಸಾಕು, ಥಳಥಳ, ಆಟಪಾಠ, ಹಗಲುರಾತ್ರಿ.

| ದ್ವಿರುಕ್ತಿ | ಅನುಕರಣಾವ್ಯಯ | ಜೋಡುನುಡಿ |
|---|---|---|
| | | |

@KTBS NOT TO BE REPUBLISHED

**ಚಟುವಟಿಕೆ 2** : ಕೆಳಗಿನ ಪದಗಳನ್ನು ಗುರುತಿಸಿ ಸ್ವಂತವಾಕ್ಯ ರಚಿಸಿ :

ಮಾದರಿ : ಬೆಟ್ಟ–ಗುಡ್ಡ (ಜೋಡುನುಡಿ) ಬೆಟ್ಟ–ಗುಡ್ಡಗಳಿಂದ ಕೂಡಿರುವ ಪ್ರದೇಶ ನೋಡಲು ಬಹಳ ಸುಂದರವಾಗಿರುತ್ತದೆ.

1. ಬೇಗ ______________________________
2. ರಪರಪ ______________________________
3. ಸಾಕುಸಾಕು ______________________________
4. ಮನೆಮಠ ______________________________
5. ಗುಡಿಗೋಪುರ ______________________________
6. ಕೊತಕೊತ ______________________________
7. ಮೊಟ್ಟಮೊದಲು ______________________________
8. ಕಸಕಡ್ಡಿ ______________________________
9. ಸರಸರ ______________________________
10. ಜುಳುಜುಳು ______________________________

@KTBS
NOT TO BE REPUBLISHED

**ಚಟುವಟಿಕೆ 3** : ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.

1. ತಿನ್ನುತಿನ್ನು : ದ್ವಿರುಕ್ತಿ : : ಧೀರಶೂರ :______________________________
2. ಕಟಕಟ : ಅನುಕರಣ ಅವ್ಯಯ :: ಸರಮಾಲೆ : ______________________________
3. ಹುಳುಹುಪ್ಪಡಿ : ಜೋಡುನುಡಿ :: ಸಾಕುಸಾಕು :______________________________
4. ತುದಿತುದಿ : ತುತ್ತತುದಿ :: ಬಯಲು ಬಯಲು : ______________________________
5. ಘಳಘಳ : ಅನುಕರಣ ಅವ್ಯಯ :: ಮಾಡುಮಾಡು :______________________________

## ಬುನಾದಿ ಹಂತ – ಚಟುವಟಿಕೆ ಹಾಳೆ 5
## ಸಂಧಿಗಳು

C2Z2U5
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ಸಂಧಿಗಳ ಪ್ರಕಾರಗಳನ್ನು ಗುರುತಿಸಿ ಸಂಧಿಪದಗಳನ್ನು ಬಿಡಿಸಿ ಬರೆದು ಸಂಧಿಕ್ರಿಯೆಗಳ ಕುರಿತು ಉತ್ತರಿಸುವರು.

### ಸಂಧಿಗಳು:

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಅರ್ಥಕ್ಕೆ ಲೋಪ ಬರದಂತೆ ಕೂಡಿಕೊಳ್ಳುವುದಕ್ಕೆ ಸಂಧಿ ಎನ್ನುವರು. ಸಂಧಿಗಳಲ್ಲಿ ಎರಡು ವಿಧಗಳಿವೆ: 1. ಕನ್ನಡ ಸಂಧಿ 2. ಸಂಸ್ಕೃತ ಸಂಧಿ.

**ಚಟುವಟಿಕೆ 1 :** ಕೊಟ್ಟಿರುವ ಸಂಧಿಗಳನ್ನು ಕನ್ನಡ ಮತ್ತು ಸಂಸ್ಕೃತ ಸಂಧಿಗಳಾಗಿ ವಿಂಗಡಿಸಿ ಬರೆಯಿರಿ.

ಗುಣಸಂಧಿ, ಶ್ಚುತ್ವ ಸಂಧಿ, ಲೋಪಸಂಧಿ, ಸವರ್ಣದೀರ್ಘಸಂಧಿ, ವೃದ್ಧಿಸಂಧಿ, ಯಣ್‌ಸಂಧಿ, ಆದೇಶಸಂಧಿ, ಅನುನಾಸಿಕ ಸಂಧಿ, ಆಗಮಸಂಧಿ, ಜಸ್ತ್ವಸಂಧಿ.

| | | | | |
|---|---|---|---|---|
| ಕನ್ನಡ ಸಂಧಿಗಳು | 1, | 2, | 3, | |
| ಸಂಸ್ಕೃತ ಸಂಧಿಗಳು | 1, | 2, | 3, | 4 |
| | 5 | 6 | 7 | |

NOT TO BE REPUBLISHED ©KTBS

**ಚಟುವಟಿಕೆ 2 :** ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳನ್ನು ಬಿಡಿಸಿ ಬರೆದು, ಸಂಧಿ ಹೆಸರಿಸಿ.

| ಸರಳವಾಕ್ಯ | ಸಂಧಿಪದ | ಬಿಡಿಸಿ ಬರೆದಾಗ | ಸಂಧಿ ಹೆಸರು |
|---|---|---|---|
| ಮಳೆಗಾಲವೆಂದರೆ ಮಕ್ಕಳಿಗೆ ಬಹಳ ಇಷ್ಟ. | ಮಳೆಗಾಲ | ಮಳೆ+ಕಾಲ | ಆದೇಶ ಸಂಧಿ |
| ಅವನು ಊರೂರು ಅಲೆದನು. | | | |
| ಮಳೆಗಾಲದಲ್ಲಿ ಕಪ್ಪೆಗಳು ವಟಗುಟ್ಟುತ್ತವೆ. | | | |
| ನಮ್ಮ ಮನೆಯಲ್ಲಿ ಹಸುಗಳಿವೆ. | | | |
| ಅವರು ಮನೆಯೊಳಗೆ ಬಂದು ಕುಳಿತರು. | | | |
| ಮಕ್ಕಳು ಸೋಪಿನಿಂದ ಕೈಯನ್ನು ತೊಳೆದುಕೊಂಡರು. | | | |
| ಊರೊಳಗೆ ಹಬ್ಬದ ವಾತಾವರಣವಿತ್ತು. | | | |
| ಸೈನಿಕರು ಶತ್ರುಗಳ ಬೆಂಬತ್ತಿದರು. | | | |
| ಸಂಗೀತಳು ಹೂಬುಟ್ಟಿಯಲ್ಲಿ ಹೂವುಗಳನ್ನು ತಂದಳು. | | | |
| ಪುಟ್ಟಮಕ್ಕಳ ಮಾತಂತು ಮಧುರವಾಗಿರುತ್ತದೆ. | | | |
| ಮರಗಿಡಗಳು ಮೈದೊಳೆದು ನಿಂತವು. | | | |
| ಶಾಲೆಯು ದೇವಾಲಯದಂತೆ ಇದೆ. | | | |

| ಸರಳವಾಕ್ಯ | ಸಂಧಿಪದ | ಬಿಡಿಸಿ ಬರೆದಾಗ | ಸಂಧಿ ಹೆಸರು |
|---|---|---|---|
| ಸೂರ್ಯೋದಯದ ನೋಟ ರಮ್ಯವಾಗಿದೆ. | | | |
| ಮಹರ್ಷಿಗಳು ಮುಂಜಾನೆಯೇ ಏಳುತ್ತಿದ್ದರು. | | | |
| ಮಕ್ಕಳಿಗೆ ಸಿಹಿ ಎಂದರೆ ಅತ್ಯಂತ ಪ್ರಿಯ.. | | | |
| ಗಿರೀಶನು ಗಿಡವನ್ನು ನೆಟ್ಟನು.. | | | |

**ಚಟುವಟಿಕೆ 3** : ಕೊಟ್ಟಿರುವ ಪದಗಳನ್ನು ಓದಿಕೊಂಡು, ವರ್ಗೀಕರಿಸಿ ಬರೆಯಿರಿ.

ಒಂದೊಂದು, ಮತ್ತೊಬ್ಬ, ಮೇಲೇಳು, ಎಳೆಗರು, ಬೆಟ್ಟದಾವರೆ, ಕಂಬನಿ, ಹೂದೋಟ, ಗುರುವನ್ನು ಗಾಳಿಯನ್ನು, ಕೆನೆವಾಲು, ಹಳಗನ್ನಡ, ಎಳೆವಳ್ಳಿ,

| ಲೋಪಸಂಧಿ | ಆಗಮಸಂಧಿ | ಆದೇಶಸಂಧಿ |
|---|---|---|
| | | |
| | | |
| | | |

**ಚಟುವಟಿಕೆ 4:** ಮಾದರಿಯಂತೆ ಕೊಟ್ಟಿರುವ ಸಂಧಿಪದಗಳನ್ನು ಬಿಡಿಸಿ ಬರೆಯಿರಿ.

| ಮಾದರಿ:–ಕಂಬನಿ = ಕಣ್ + ಪನಿ | | |
|---|---|---|
| 1. | ಬೆಟ್ಟದಾವರೆ | |
| 2. | ಕೆನೆವಾಲು | |
| 3. | ಎಳೆವಳ್ಳಿ | |
| 4. | ಮತ್ತೊಬ್ಬ | |
| 5. | ಊರೂರು | |
| 6. | ಮಾತಿಲ್ಲ | |
| 7. | ಮರವನ್ನು | |
| 8. | ಶಾಲೆಯಿಂದ | |
| 9. | ಮೈದೊಳೆ | |

@KTBS NOT TO BE REPUBLISHED

**ಚಟುವಟಿಕೆ 5 :** ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ಅತ್ಯಂತ | ಯಣ್ಸಂಧಿ | |
| ಲೋಕೈಕ | ವೃದ್ಧಿಸಂಧಿ | |
| ಮರೆಯಾಗು | ಆದೇಶಸಂಧಿ | |
| ಚಂದ್ರೋದಯ | ಗುಣಸಂಧಿ | |
| ನಾವೆಲ್ಲಾ | ಲೋಪಸಂಧಿ | |
| ಸುರಾಸುರ | ಆಗಮಸಂಧಿ | |
| ಚಳಿಗಾಲ | ಸವರ್ಣದೀರ್ಘ ಸಂಧಿ | |

# ಸಮಾಸಗಳು ಮತ್ತು ತತ್ಸಮ ತದ್ಭವಗಳು

A2A2D8
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಿದ್ಯಾರ್ಥಿಗಳು ವಾಕ್ಯಗಳಲ್ಲಿನ ಸಮಾಸ ಪದಗಳನ್ನು ಗುರುತಿಸುವರು. ತತ್ಸಮ ತದ್ಭವಗಳನ್ನು ಗುರುತಿಸುವರು.

## ಸಮಾಸಗಳನ್ನು ಅರಿಯೋಣ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಸೇರುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪ ಮಾಡಿಕೊಂಡು ಹೇಳುವುದನ್ನು ಸಮಾಸ ಎಂದು ಕರೆಯುತ್ತೇವೆ. ಸಮ್ ಅಂದರೆ ಸಂಕ್ಷೇಪ, ಆಸ ಎಂದರೆ ಆಗಿರುವುದು. ಸಂಕ್ಷೇಪವಾಗಿರುವುದೇ ಸಮಾಸ. ಸಮಾಸ ಎಂದರೆ ಸಮಸ್ತಪದ. ಸಮಾಸ ಪದವನ್ನು ಬಿಡಿಸಿ ಬರೆಯುವುದಕ್ಕೆ 'ವಿಗ್ರಹವಾಕ್ಯ' ಎನ್ನುತ್ತೇವೆ.

**ಚಟುವಟಿಕೆ 1 :** ಕೆಳಗಿನ ಸಮಾಸ ಪದಗಳನ್ನು ಬಿಡಿಸಿ ಬರೆಯಿರಿ:

1. ಹಿಂದಲೆ =________________
2. ನಡುದಾರಿ = ________________
3. ಬೆಟ್ಟದಾವರೆ = ________________
4. ಕೈತೊಳೆ = ________________
5. ಅರಮನೆ = ________________

**ಚಟುವಟಿಕೆ 2 :** ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

1. ಆ ಕಲ್ಲು, ಈ ಮನೆ, ನೇಯ್ದುವಸ್ತ್ರ, ಅರಮನೆ = ________________
2. ಹೆಬ್ಬಾವು, ದೇವಮಂದಿರ, ಮೆಲ್ನುಡಿ, ಬೆಳ್ಗೊಡೆ = ________________
3. ಸವರ್ಣದೀರ್ಘ,ತತ್ಪುರುಷ, ಅಂಶಿ, ದ್ವಿಗು = ________________
4. ಹಣೆಗಣ್ಣ, ಮುಕ್ಕಣ್ಣು, ಚಕ್ರಪಾಣಿ, ದಶಕಂಠ = ________________
5. ನಲ್ನುಡಿ, ಕರವಸ್ತ್ರ, ಮೈಮುಟ್ಟು, ತಲೆಬಾಗು = ________________

**ಚಟುವಟಿಕೆ 3 :** ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ 4ನೇ ಪದಕ್ಕೆ ಸಂಬಂದಿಸಿದ 4ನೇ ಪದ ಬರೆಯಿರಿ.

1. ಕೈಯ + ಮುಂದು : ಮುಂಗೈ :: ಹಿರಿದಾದ + ದಾರಿ : ________________
1. ಅವನು + ಹುಡುಗ : ಆ ಹುಡುಗ :: ಇದು + ಪುಸ್ತಕ : ________________
2. ಇನಿದು + ಮಾವು : ಇಮ್ಮಾವು :: ಹಿರಿದು + ಮರ : ________________
3. ಕಾಲಿನ + ಬಳೆ : ಕಾಲ್ಬಳೆ :: ಕಣ್+ ಪನಿ : ________________
4. ಕಾರ್ಯವನ್ನು + ಮಾಡಿದ :ಕಾರ್ಯಮಾಡಿದ :: ಮೈಯನ್ನು + ತೊಳೆದು : ________________

@KTBS NOT TO BE REPUBLISHED

**ಚಟುವಟಿಕೆ 4 :** ಹೊಂದಿಸಿ ಬರೆಯಿರಿ.

| ಕ್ರ.ಸಂ. | ಎ. ಪಟ್ಟಿ | ಉತ್ತರ | ಬಿ. ಪಟ್ಟಿ |
|---|---|---|---|
| 1. | ಬಹುವ್ರೀಹಿ | | ರಾಮಲಕ್ಷ್ಮಣರು |
| 2. | ಕ್ರಿಯಾ | | ಮೂಗಾವುದ |
| 3. | ದ್ವಿಗು | | ಈ ಶಾಲೆ |
| 4 | ಗಮಕ | | ಶಿರಬಾಗು |
| 5. | ದ್ವಂದ್ವ | | ನಾಲ್ಮೊಗ |

**ಚಟುವಟಿಕೆ 5 :** ಮಾದರಿಯಂತೆ ವಾಕ್ಯಗಳಲ್ಲಿ ಸಮಾಸ ಪದವನ್ನು ಗುರುತಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.

ಮಾದರಿ ; ಆ ಮರದ ಮೇಲೆ ಪಕ್ಷಿಗಳು ಗೂಡು ಕಟ್ಟಿವೆ.

ಉತ್ತರ ; ಆ ಮರ = ಅದು + ಮರ= ಗಮಕ ಸಮಾಸ

1 ಮೈಸೂರು ಅರಮನೆ ಸುಂದರವಾಗಿದೆ.

_______________

2 ನಮ್ಮ ಊರಿನಲ್ಲಿ ಮಳೆ ಬಾರದೆ ಕೆರೆಕಟ್ಟೆಬಾವಿಗಳು ಬತ್ತಿಹೋಗಿವೆ.

_______________

3 ಹೆಜ್ಜೇನು ಕಚ್ಚಿದರೆ ತುಂಬಾ ನೋವಾಗುತ್ತದೆ.

_______________

4 ಮಕ್ಕಳಿಗೆ ಪಂಚೇಂದ್ರಿಯಗಳ ಮಹತ್ವ ತಿಳಿಸಿಕೊಡಬೇಕು.

_______________

5 ನಡುಮನೆಯಲ್ಲಿ ಅಮ್ಮ ಕುಳಿತಿದ್ದಾಳೆ.

_______________

6 ಮುಕ್ಕಣ್ಣನು ಬಿಲ್ವಪತ್ರೆ ಪ್ರಿಯ.

_______________

@KTBS NOT TO BE REPUBLISHED

# ತತ್ಸಮ – ತದ್ಭವ

**ಚಟುವಟಿಕೆ 6 :** ಕೆಳಗಿನ ಅಂಕಣದಲ್ಲಿರುವ ಪದಗಳಲ್ಲಿ ಸಂಸ್ಕೃತ ಪದಗಳನ್ನು ಮಾತ್ರ ಆರಿಸಿ ಬರೆಯಿರಿ.

| | |
|---|---|
| **ಪದಗಳು** | **ಸಂತೋಷ, ಶಾಲೆ, ಪರ್ವ, ಹಬ್ಬ, ಕಾವ್ಯ, ಚಂದಿರ, ಕೀರ್ತಿ, ಯುದ್ಧ, ವಿದ್ಯೆ, ದಿಟ್ಟಿ, ಧ್ವನಿ, ಮಾಲಾ.** |
| ಸಂಸ್ಕೃತ ಪದಗಳು | |

**ಚಟುವಟಿಕೆ 7 :** ಕೊಟ್ಟಿರುವ ಪದಗಳಿಗೆ ತದ್ಭವರೂಪ ಬರೆಯಿರಿ.

| ತತ್ಸಮ | ತದ್ಭವ |
|---|---|
| ಪ್ರಾಣ | |
| ಶಕ್ತಿ | |
| ಕಾರ್ಯ | |
| ಪುಣ್ಯ | |
| ಬ್ರಹ್ಮ | |
| ಪಟ್ಟಣ | |
| ಸ್ಥಾನ | |

**ಚಟುವಟಿಕೆ 8 :** ಇವುಗಳಿಗೆ ತತ್ಸಮ ರೂಪ ಬರೆಯಿರಿ.

| ತದ್ಭವ | ತತ್ಸಮ |
|---|---|
| ತವಸಿ | |
| ಕೋಗಿಲೆ | |
| ಬಿಜ್ಜೋದರ | |
| ಹಸಾದ | |
| ಜೂಜು | |
| ಜಸ | |
| ಬಂಚ | |
| ಬೇಹಾರಿ | |

@KTBS
NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 7

# ವಾಕ್ಯ ಪ್ರಬೇಧಗಳು

D1F9J7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ವಾಕ್ಯದಲ್ಲಿನ ಪ್ರಭೇದಗಳಾದ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ವಿಂಗಡಿಸುವರು.

**ಚಟುವಟಿಕೆ 1 :** ಚಿತ್ರವನ್ನು ನೋಡಿ ನೀಡಿರುವ ಸ್ಥಳದಲ್ಲಿ ವಾಕ್ಯಗಳನ್ನು ರಚಿಸಿ, ಕರ್ತೃ, ಕರ್ಮ, ಕ್ರಿಯಾಪದಗಳನ್ನು ವಿಂಗಡಿಸಿ ಬರೆಯಿರಿ.


ಚಿತ್ರ 1


ಚಿತ್ರ 2


ಚಿತ್ರ 3


ಚಿತ್ರ 4

| ಚಿತ್ರ ಸಂಖ್ಯೆ | ವಾಕ್ಯ | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |

@KTBS NOT TO BE REPUBLISHED

**ಚಟುವಟಿಕೆ 2 :** ಈ ಗದ್ಯಭಾಗವನ್ನು ಓದಿಕೊಂಡು ಕರ್ತೃ,ಕರ್ಮ,ಕ್ರಿಯಾಪದವಿರುವ ಪೂರ್ಣ ವಾಕ್ಯಗಳನ್ನು ಆರಿಸಿ ಬರೆಯಿರಿ.

ಮಹಾತ್ಮ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸಿದರು. ಕಾಲ್ನಡಿಗೆಯಲ್ಲಿ ನಡೆದು, ಸಬರಮತಿ ಮತ್ತು ದಂಡಿಯ ಮಾರ್ಗ ಮಧ್ಯೆ ಆನಂದಾಶ್ರಮ ಸ್ಥಾಪಿಸಿದರು. ಕರ ವಿರೋಧದ ವಿರುದ್ಧವಾಗಿ ಉಪ್ಪನ್ನು ತಯಾರಿಸಿದರು. ಇದರಿಂದ ಪ್ರೇರಿತರಾಗಿ ಭಾರತೀಯರು ಸ್ವತಃ ಉಪ್ಪನ್ನು ತಯಾರಿಸಿದರು.

1. ________________________________

2. ________________________________

3. ________________________________

**ಚಟುವಟಿಕೆ 3** : ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಅಪೂರ್ಣ ವಾಕ್ಯಗಳನ್ನು ಪೂರ್ಣಗೊಳಿಸಿ.

1. ವಿದ್ಯಾರ್ಥಿಗಳು ಊಟವನ್ನು ______________________________ (ಕ್ರಿಯಾಪದ ಬರೆ)
2. ಸುಮಂತನು ______________________________ ಬರೆದನು (ಕರ್ಮಪದ ಬರೆ)
3. ______________________________ ಬಾಣವನ್ನು ಹೊಡೆದನು (ಕರ್ತೃಪದ ಬರೆ)

**ಚಟುವಟಿಕೆ 4** : ಈ ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

**1. ಕಟ್ಟಿದರು । ಶಿಲ್ಪಿಗಳು । ಗುಡಿಯನ್ನು**

ಉತ್ತರ : ______________________________________________

**2. ತಿನ್ನುತ್ತದೆ । ಹಸುವು । ಗಿಡವನ್ನು**

ಉತ್ತರ : ______________________________________________

**3. ರೈತನು । ನೆಟ್ಟನು । ಗಿಡವನ್ನು**

ಉತ್ತರ : ______________________________________________

@KTBS
NOT TO BE REPUBLISHED

**ಚಟುವಟಿಕೆ 5** : ಕೊಟ್ಟಿರುವ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

**1. ಹುಲಿಯು ಜಿಂಕೆಯನ್ನು ಬೇಟೆಯಾಡಿತು.**

ಕರ್ತೃಪದ : ______________________________________________

ಕರ್ಮಪದ : ______________________________________________

ಕ್ರಿಯಾಪದ : ______________________________________________

**2. ತಾಯಿಯು ಅಡುಗೆಯನ್ನು ಮಾಡಿದಳು.**

ಕರ್ತೃಪದ : ______________________________________________

ಕರ್ಮಪದ : ______________________________________________

ಕ್ರಿಯಾಪದ : ______________________________________________

## ಬುನಾದಿ ಹಂತ – ಚಟುವಟಿಕೆ ಹಾಳೆ 8
# ಪ್ರಾಸಪದಗಳು ಮತ್ತು ಅಲಂಕಾರ

J3E2K7
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ** : ವಿದ್ಯಾರ್ಥಿಗಳು ಪದ್ಯದಲ್ಲಿನ ಪ್ರಾಸ ಪದಗಳನ್ನು ಗುರುತಿಸುವರು ಹಾಗೂ ವಾಕ್ಯಗಳಲ್ಲಿನ ಅಲಂಕಾರ ಪದಗಳನ್ನು ಪತ್ತೆಹಚ್ಚಿ ಸಮನ್ವಯಗೊಳಿಸುವರು.

**ಚಟುವಟಿಕೆ 1** : ಕೆಳಗಿನ ಪದ್ಯವನ್ನು ಓದಿಕೊಂಡು ಆದಿಪ್ರಾಸ ಮತ್ತು ಅಂತ್ಯಪ್ರಾಸಗಳನ್ನು ಗುರುತಿಸಿ ಬರೆಯಿರಿ.

ಬರಲಿ ಧರೆಗೆ ಮಳೆ
ಹಸಿರಾಗಲಿ ಸದಾ ಇಳೆ
ಕಾಡಲಿ ಹಸಿರು ಹೊಮ್ಮಿರಲಿ
ನಾಡಲಿ ಹಸನು ಬದುಕಿರಲಿ
ಮಳೆ ಬಂದಾಗ ಇಳೆ ನೆನೆದಾಗ
ರೈತನ ಶ್ರಮಕ್ಕೆ ಬೆಲೆಯಾದಾಗ
ಬಿತ್ತಿದ ಬೀಜವು ಮೊಳೆತಾಗ
ಮೊಳೆತ ಬೀಜವು ಬೆಳೆಯುವಾಗ
ಬೆಳೆಯ ಫಲವು ದೊರೆತಾಗ
ಹಸಿವು ಇರದು ಜಗದಾಗ



| ಅದಿ ಪ್ರಾಸಗಳು | ಅಂತ್ಯ ಪ್ರಾಸಗಳು |
|---|---|
| | |

@KTBS NOT TO BE REPUBLISHED

**ಚಟುವಟಿಕೆ 2** : ಈ ಕೆಳಗಿನ ವಾಕ್ಯದಲ್ಲಿ ಖಾಲಿ ಬಿಟ್ಟಿರುವ ಸ್ಥಳದಲ್ಲಿ ಸೂಕ್ತಪದ ಬರೆದು ಅಲಂಕಾರ ವಾಕ್ಯವನ್ನು ಪೂರ್ಣಗೊಳಿಸಿ.

ಮಾದರಿ : ಮಕ್ಕಳು ಜಿಂಕೆಯಂತೆ ಜಿಗಿದರು.

1. ಮಗುವಿನ ಮುಖವು ______________________ ಸುಂದರವಾಗಿದೆ.
2. ಬೇಸಿಗೆಯ ಬಿಸಿಲು, ______________________ ಸುಡುತ್ತಿದೆ
3. ಭೀಮ ದುರ್ಯೋಧನರು ______________________ ಹೋರಾಡಿದರು.
4. ಸೀತೆಯ ಮುಖ ______________________ ಅರಳಿತು.
5. ಸತ್ಯವಾದ ಮಾತುಗಳು ಕೆಲವರಿಗೆ ______________________ಕಹಿಯಾಗಿ ಕಾಣುತ್ತವೆ.

**ಚಟುವಟಿಕೆ 3** : ಕೆಳಗಿನ ಎರಡೂ ವಸ್ತುಗಳನ್ನು ಹೋಲಿಸಿ ಅಲಂಕಾರಿಕ ವಾಕ್ಯ ರಚಿಸಿರಿ.

ಮಾದರಿ : ಮನಸ್ಸು>ಸಾಗರ – ಕವಿಯ ಮನಸ್ಸು ಸಾಗರದಂತೆ ವಿಶಾಲವಾಗಿದೆ.

1. ಹಗ್ಗ > ಹಾವು : ______________________

2. ಕೃಷ್ಣ > ಬೆಟ್ಟ : ______________________

3. ನುಡಿ > ಮುತ್ತು : ______________________

4. ಕಣ್ಣು > ಕಮಲ : ______________________

5. ತುಟಿ > ಹವಳ : ______________________

**ಚಟುವಟಿಕೆ 4** : ಈ ವಾಕ್ಯಗಳಲ್ಲಿರುವ ಉಪಮೇಯ, ಉಪಮಾನಗಳನ್ನು ಗುರುತಿಸಿ ಬರೆಯಿರಿ.

ಮಾದರಿ : ಮಗುವಿನ ತ್ವಚೆಯು ಹೂವಿನ ದಳದಂತೆ ಮೃದುವಾಗಿದೆ.

ಉಪಮೇಯ–ಮಗುವಿನ ತ್ವಚೆ

ಉಪಮಾನ–ಹೂವಿನದಳ

| ಕ್ರ.ಸಂ. | ಅಲಂಕಾರಿಕ ವಾಕ್ಯ | ಉಪಮೇಯ | ಉಪಮಾನ |
|---|---|---|---|
| 1. | ವ್ಯಾಕರಣವು ಕೆಲವರಿಗೆ ಕಬ್ಬಿಣದಷ್ಟು ಕಠಿಣವಾಗಿದೆ | | |
| 2. | ಆತನ ವ್ಯಕ್ತಿತ್ವ ಹಿಮಾಲಯದಷ್ಟು ಎತ್ತರವಾಗಿದೆ.. | | |
| 3. | ಮೀನಿನ ಮೈ ಸಾಬೂನಿನಂತೆ ಮೃದುವಾಗಿದೆ | | |
| 4. | ಎನ್ನ ಕಾಲೇ ಕಂಬ | | |
| 5 | ನಮ್ಮ ಮನೆಯ ನಾಯಿಯು ಹುಲಿಯಂತೆ | | |
| 6 | ನಮ್ಮ ಶಾಲೆಯ ಕೈತೋಟವು ಉದ್ಯಾನವನದಂತೆ | | |
| 7 | ಶಾಲೆಯೇ ದೇವಸ್ಥಾನ | | |
| 8 | ಮಗುವಿನ ಮುಖವು ಚಂದಿರನಂತೆ | | |

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 9

# ಛಂದಸ್ಸು

M7J9R6
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಮಾತ್ರಾಗಣ ಛಂದಸ್ಸನ್ನು ಗುರುತಿಸುವರು.

ಪದ್ಯ ರಚನೆಯ ನಿಯಮವನ್ನು ತಿಳಿಸುವ ಶಾಸ್ತ್ರಕ್ಕೆ 'ಛಂದಸ್ಸು' ಎನ್ನುವರು.

**ಚಟುವಟಿಕೆ 1** : ಈ ಅಕ್ಷರಗಳಿಗೆ ಲಘು ಮತ್ತು ಗುರು ಗುರುತಿಸಿ (ಪ್ರಸ್ತಾರ ಹಾಕಿ) ಬರೆಯಿರಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| | | | | | | | | | | | | | | |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| | | | | | | | | | | | | | | |
| ನ | ನಾ | ನಿ | ನೀ | ನು | ನೂ | ನೃ | ನೆ | ನೇ | ನೈ | ನೊ | ನೋ | ನೌ | ನಂ | ನಃ |
| | | | | | | | | | | | | | | |

@KTBS NOT TO BE REPUBLISHED

**ಚಟುವಟಿಕೆ 2** : ಖಾಲಿ ಬಿಟ್ಟಿರುವ ಸ್ಥಳದಲ್ಲಿ ಲಘು ಅಥವಾ ಗುರು ಬರೆಯಿರಿ.

* ಎಲ್ಲಾ ಹ್ರಸ್ವಸ್ವರಗಳು– ಒಂದು ಮಾತ್ರಕಾಲದಲ್ಲಿ ಉಚ್ಚರಿಸುವ ಅಕ್ಷರಗಳು ______________ ಗಳಾಗುತ್ತವೆ.
* ಎಲ್ಲಾ ದೀರ್ಘಸ್ವರಗಳು– ಎರಡು ಮಾತ್ರಕಾಲದಲ್ಲಿ ಉಚ್ಚರಿಸುವ ಅಕ್ಷರಗಳು______________ ಗಳಾಗುತ್ತವೆ.
* ಹ್ರಸ್ವಸ್ವರಗಳಿಂದ ಕೂಡಿದ ವ್ಯಂಜನಾಕ್ಷರಗಳು ______________ ಗಳಾಗುತ್ತವೆ.
* ದೀರ್ಘಸ್ವರಗಳಿಂದ ಕೂಡಿದ ವ್ಯಂಜನಾಕ್ಷರಗಳು ______________ ಗಳಾಗುತ್ತವೆ.
* ಒತ್ತಕ್ಷರದ ಹಿಂದಿನ ಅಕ್ಷರ ______________ ವಾಗುತ್ತದೆ.
* ಯೋಗವಾಹಗಳಿಂದ ಕೂಡಿದ ಎಲ್ಲಾ ಅಕ್ಷರಗಳು ______________ ಗಳಾಗುತ್ತವೆ.
* ಮೂಲ ವ್ಯಂಜನಾಕ್ಷರದಿಂದ ಕೂಡಿದ ಅಕ್ಷರ ತನ್ನ ಹಿಂದಿನ ಅಕ್ಷರವನ್ನು ಒಳಗೊಂಡಂತೆ ______________ ವಾಗುತ್ತದೆ.
* ಐ ಮತ್ತು ಔ ಸಹಿತವಾದ ಅಕ್ಷರಗಳು ______________ ವಾಗುತ್ತವೆ.
* ಷಟ್ಪದಿಯ ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರ ______________ ಇದ್ದರೂ ______________ ವಾಗುತ್ತದೆ.

**ಚಟುವಟಿಕೆ 3** : ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ ಲಕ್ಷಣಗಳನ್ನು ತಿಳಿಯಿರಿ.

ಕಾವೇರಿಯಿಂದಮಾ ಗೋ

ದಾವರಿ ವರಮಿರ್ದ ನಾಡದಾ ಕನ್ನಡದೊಳ್

ಭಾವಿಸಿದ ಜನಪದಂ ವಸು

ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

________________________________________

________________________________________

________________________________________

________________________________________

________________________________________

________________________________________

________________________________________

________________________________________

### ಕಂದ ಪದ್ಯದ ಲಕ್ಷಣಗಳನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ

1. ಕಂದಪದ್ಯವು ____________ ಸಾಲುಗಳಿಂದ ಕೂಡಿದೆ.
2. ಒಂದು ಮತ್ತು ______ ಸಾಲುಗಳು ಮಾತ್ರಾ ದೃಷ್ಟಿಯಿಂದ ಸಮನಾಗಿದ್ದು, ನಾಲ್ಕು ಮಾತ್ರೆಯ ______ ಗಣಗಳಿಂದ ಕೂಡಿವೆ
3. .________ ಮತ್ತು ನಾಲ್ಕನೆಯ ಸಾಲುಗಳು ಮಾತ್ರಾ ದೃಷ್ಟಿಯಿಂದ ಸಮನಾಗಿದ್ದು, ________ ಮಾತ್ರೆಯ ಐದು ಗಣಗಳಿಂದ ಕೂಡಿವೆ.
4. ಕಂದಪದ್ಯದಲ್ಲಿ ಒಟ್ಟು 16 ಗಣಗಳಿದ್ದು, ಒಟ್ಟು _________ ಮಾತ್ರೆಗಳಿರುತ್ತವೆ.
5. ಕಂದಪದ್ಯವು ವಿಷಮಗಣ ಸ್ಥಾನದಲ್ಲಿ __________ ಗಣ ಬರುವುದಿಲ್ಲ.

NOT TO BE REPUBLISHED
©KTBS

**ಚಟುವಟಿಕೆ 4** : ಕೊಟ್ಟಿರುವ ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಛಂದಸ್ಸಿನಲ್ಲಿ ಕಾಲವನ್ನು ಹೇಳುವ ಪದ ________________
   ಅ) ಗಣ ಆ) ಪ್ರಾಸ ಇ) ಮಾತ್ರೆ ಈ) ಯತಿ
2. ಒಂದು ಮಾತ್ರಾಕಾಲದಲ್ಲಿ ಹೇಳುವ ಅಕ್ಷರಗಳನ್ನು ಹೀಗೆನ್ನುವರು ________________
   ಅ) ಲಘು ಆ) ಗುರು ಇ) ಪ್ರಾಸ ಈ) ಪ್ಲುತ
3. ಎರಡು ಮಾತ್ರಾ ಕಾಲದಲ್ಲಿ ಹೇಳುವ ಅಕ್ಷರಗಳನ್ನು ಹೀಗೆನ್ನುವರು ________________

ಅ) ಲಘು ಆ) ಗುರು ಇ) ಪ್ರಾಸ ಈ) ಪ್ಲುತ

4. ನಾಲ್ಕು ಸಾಲಿನ ಪದ್ಯಕ್ಕೆ ಉದಾಹರಣೆ ________________
ಅ) ಷಟ್ಪದಿ ಆ) ಕಂದ ಇ) ರಗಳೆ ಈ) ವಚನಗಳು

5. ಮಾತ್ರೆಗಳನ್ನು ಎಣಿಸಿ ಗುಂಪು ಮಾಡುವ ಛಂದಸ್ಸು ________________
ಅ) ಮಾತ್ರಾ ಛಂದಸ್ಸು ಆ) ಅಕ್ಷರ ಛಂದಸ್ಸು ಇ) ಅಂಶ ಛಂದಸ್ಸು ಈ) ಗಣ ಛಂದಸ್ಸು

**ಚಟುವಟಿಕೆ 4 :** ಕೋಷ್ಟಕದಲ್ಲಿ ಪದಗಳಿಗೆ ಪ್ರಸ್ತಾರ ಹಾಕಿರಿ.

| | |
|---|---|
| **ಮಾದರಿ:** | **U U U**<br>**ಸಮಯ** |
| ಕಮಲ | ಕಲ್ಪತರು |
| ಅಮರ | ಭಾರತ |
| ಅಕ್ಷರ | ಐವರು |
| ಕದಂಬ | ತರಗತಿ |
| ಕಾಗದ | ಕೌಶಲ್ಯ |
| ಔಷಧ | ಅಂತಃಕರಣ |
| ಜಾಣ | ಪುರದೊಳ್ |
| ಕಂಬ | ದುಃಖ |

@KTBS NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 10

# ಪತ್ರ ಬರೆಯೋಣ

J6F1H2
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ** – ವಿದ್ಯಾರ್ಥಿಗಳು ದೈನಂದಿನ ವ್ಯವಹಾರಕ್ಕಾಗಿ ಪತ್ರ ಬರೆಯುವ ಕೌಶಲವನ್ನು ಅಭಿವೃದ್ಧಿ ಪಡಿಸಿಕೊಳ್ಳುವರು.

**ಚಟುವಟಿಕೆ :** 1 ಚಿತ್ರ ಸನ್ನಿವೇಶವನ್ನು ಗಮನಿಸಿ ಪತ್ರದ ವಿಧವನ್ನು ಹೆಸರಿಸಿರಿ.









ಪತ್ರದ ವಿಧ : ____________________ ಪತ್ರದ ವಿಧ :____________________

**ಚಟುವಟಿಕೆ 2** : ಈ ಕೆಳಗಿನ ಅಂಶಗಳನ್ನು ವ್ಯವಹಾರಿಕ ಪತ್ರ ಮತ್ತು ವೈಯಕ್ತಿಕ ಪತ್ರದ ಅಂಶಗಳಿಗೆ ಅನುಗುಣವಾಗಿ ವಿಂಗಡಿಸಿ ಬರೆಯಿರಿ.

(ಕ್ಷೇಮ, ಹೆಸರು, ತಮ್ಮವಿಶ್ವಾಸಿ, ದಿನಾಂಕ, ತೀರ್ಥರೂಪ ಸಮಾನರಾದ, ಸ್ಥಳ, ಇಂದ, ಮಾನ್ಯರೇ, ವಂದನೆಗಳೊದಿಗೆ, ಸ್ಥಳ, ಇಂತಿ ನಿಮ್ಮ ಪ್ರೀತಿಯ ಮಗ/ಮಗಳು, ಇವರಿಗೆ, ವಿಷಯ, ದಿನಾಂಕ)

| ವ್ಯವಹಾರಿಕಪತ್ರ | ವೈಯಕ್ತಿಕಪತ್ರ |
|---|---|
| 1. | 1. |
| 2. | 2. |
| 3. | 3. |
| 4. | 4. |
| 5. | 5. |
| 6. | 6. |
| 7. | 7. |
| 8. | 8. |

NOT TO BE REPUBLISHED @KTBS

**ಚಟುವಟಿಕೆ 3** : ನಿಮ್ಮನ್ನು ದಾವಣಗೆರೆಯ ನಿವಾಸಿ ಕೌಶಿಕ್ ಎಂದು ಭಾವಿಸಿಕೊಂಡು ಚೆನ್ನಮ್ಮ ಬಡಾವಣೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಿ ಕೊಡುವಂತೆ ಕೋರಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ.

ಇವರಿಂದ,

______________________

______________________

______________________

______________________

ಇವರಿಗೆ.

______________________

______________________

______________________

______________________

ಮಾನ್ಯರೇ,

ವಿಷಯ: ______________________

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ______________________

______________________

______________________

______________________

______________________

______________________

______________________

______________________

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ಸ್ಥಳ:

ದಿನಾಂಕ:

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 1
## ನಾಮಪದಗಳು

B3R7Z5
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ಪದಗಳ ಮೂಲಕ ನಾಮಪದಗಳನ್ನು ಹಾಗೂ ನಾಮವಾಚಕಗಳನ್ನು ಗುರುತಿಸಿ, ಸರಿಯಾದ ರೀತಿಯಲ್ಲಿ ವಾಕ್ಯಗಳಲ್ಲಿ ಬಳಸಲು ಕಲಿಯುವರು.

**ಚಟುವಟಿಕೆ 1 :** ಪಠ್ಯಪುಸ್ತಕವನ್ನು ಬಳಸಿಕೊಂಡು ನಾಮವಾಚಕಗಳನ್ನು ಪಟ್ಟಿ ಮಾಡಿರಿ.

| | | |
|---|---|---|
| 1. | 2. | 3. |
| 4. | 5. | 6. |
| 7. | 8. | 9. |

**ಚಟುವಟಿಕೆ 2 :** ಈ ವಾಕ್ಯಗಳಲ್ಲಿ ನಾಮಪದ ಹಾಗೂ ನಾಮವಾಚಕಗಳನ್ನು ಗುರುತಿಸಿ ಬರೆಯಿರಿ.

| | | |
|---|---|---|
| 1. ಇಗೋ ನೋಡು ಲಕ್ಷ್ಮಣ ತಾಪಸರ ಬೀಡು. | | (ಅಂಕಿತನಾಮ) |
| 2. ವೆಸ್ಟ್ ಮಿನಿಸ್ಟರ್ ಅಬೆ ಕವಿಗಳ ಸ್ಮಾರಕವಾಗಿದೆ. | | (ಅನ್ವರ್ಥನಾಮ) |
| 3. ನಾಲ್ವಡಿ ಕೃಷ್ಣರಾಜ ಒಡೆಯರ್ ಹತ್ತನೆಯ ವಯಸ್ಸಿನಲ್ಲಿ ಪಟ್ಟಾಭಿಷಿಕ್ತರಾದರು. | | (ಸಂಖ್ಯೇಯವಾಚಕ) |
| 4. ಭಾರತದ ದಕ್ಷಿಣ ಭಾಗದಲ್ಲಿ ಕನ್ಯಾಕುಮಾರಿ ಇದೆ. | | (ದಿಗ್ವಾಚಕ) |
| 5. ಕೃಷ್ಣಮೂರ್ತಿಯರ ಹಿರಿಯರು ಸಣ್ಣದೊಂದು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದರು. | | (ಸರ್ವನಾಮ) |
| 6. ಸಾವಿರ ಕಂಬಗಳ ಜೈನ ಬಸದಿ ಮೂಡಬಿದಿರೆಯಲ್ಲಿದೆ. | | (ಸಂಖ್ಯಾವಾಚಕ) |
| 7. ಸಮುದ್ರದ ಆಳದಲ್ಲಿ ಹಲವಾರು ಸಸ್ಯ ಪ್ರಭೇದಗಳಿವೆ. | | (ರೂಢನಾಮ) |
| 8. ಬಂಡೀಪುರದ ಕಾಡಿನಲ್ಲಿ ಸುಂದರವಾದ ಹುಲಿಗಳಿವೆ. | | (ಗುಣವಾಚಕ) |
| 9. ವಿದ್ಯಾರ್ಥಿಗಳ ಮನೆಯ ವಾತಾವರಣ ಉತ್ತಮವಾಗಿರಬೇಕು. | | (ರೂಢನಾಮ) |
| 10. ಪಂಪ ಮಹಾಕವಿ ಎರಡು ಪ್ರಮುಖ ಕೃತಿಗಳನ್ನು ರಚಿಸಿದ್ದಾನೆ. | | (ಸಂಖ್ಯಾವಾಚಕ) |
| 11. ನಮ್ಮ ಸೈನಿಕರು ದೇಶದ ಮಹಾರಕ್ಷಕರು. | | (ಅನ್ವರ್ಥನಾಮ) |
| 12. ಭಾರತದ ಉತ್ತರ ತುದಿಯಲ್ಲಿ ಕೈಲಾಸ ಪರ್ವತವಿದೆ. | | (ದಿಗ್ವಾಚಕ) |

©KTBS NOT TO BE REPUBLISHED

**ಚಟುವಟಿಕೆ 3** : ಗದ್ಯಭಾಗವನ್ನು ಓದಿಕೊಂಡು ನಾಮಪದವನ್ನು ನಾಮವಾಚಕಗಳನ್ನು ಗುರುತಿಸಿ ಬರೆಯಿರಿ.

ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನವನದ ನಾಗರಹೊಳೆ ಅಭಯಾರಣ್ಯಕ್ಕೆ ಒರಗಿಕೊಂಡಂತೆ ಇರುವ ಪುಟ್ಟಹಳ್ಳಿ ಸಿದ್ದಾಪುರ. ಊರಿನ ಸಣ್ಣ ಗುಡಿಸಿಲಿನಲ್ಲಿ ಐದನೇ ತರಗತಿಯ ಬಾಲಕನೊಬ್ಬ ತನ್ನ ಪುಸ್ತಕಗಳನ್ನು ಹಾಕಿಕೊಳ್ಳಲು ಇರುವ ಹಳೆಯ ಶಾಲಾಬ್ಯಾಗನ್ನು ಹೆಗಲಿಗೇರಿಸಿಕೊಂಡು ; ಹತ್ತು ನಿಮಿಷದಲ್ಲಿ ನಡೆದು ಸೇರಬಹುದಾದ ಕಾಲುದಾರಿಯಲ್ಲಿ ಹೊರಟನು. ಪೂರ್ವದಿಕ್ಕಿನ ಸೂರ್ಯನ ಎಳೆಬಿಸಿಲಿನಲ್ಲಿ ತನ್ನಷ್ಟು ಉದ್ದದ ನೆರಳನ್ನು ನೋಡಿ ಶಾಲೆಯ ಸಮಯವಾಗಿಲ್ಲವೆಂದುಕೊಂಡು ನಿಧಾನ ನಡಿಗೆಯಲ್ಲಿ ತಲುಪುವಷ್ಟರಲ್ಲಿ ವಿದ್ಯಾರ್ಥಿಗಳೆಲ್ಲರೂ ಶಿಕ್ಷಕರು ಹೇಳಿದ ಕಾರ್ಯವನ್ನು ಆರಂಭಿಸಿಯೇ ಬಿಟ್ಟಿದ್ದರು.

ಅಂಕಿತನಾಮಗಳು : ______________________________

ರೂಢನಾಮಗಳು : ______________________________

ಅನ್ವರ್ಥನಾಮಗಳು : ______________________________

ಗುಣವಾಚಕಗಳು : ______________________________

ಸಂಖ್ಯಾವಾಚಕಗಳು : ______________________________

ಸಂಖ್ಯೇಯವಾಚಕಗಳು : ______________________________

ಪರಿಮಾಣವಾಚಕಗಳು : ______________________________

ದಿಗ್ವಾಚಕಗಳು : ______________________________

**ಚಟುವಟಿಕೆ 4** : ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.

1 ಪರಿಮಾಣವಾಚಕಗಳು : ಅಷ್ಟು : : ದಿಗ್ವಾಚಕಗಳು

ಉತ್ತರ : ____________________

2 ಅಂಕಿತನಾಮ : ಅರ್ಜುನ : : ಅನ್ವರ್ಥನಾಮ :

ಉತ್ತರ : ____________________

3 ಸುಂದರ ಮನೆ : ಗುಣವಾಚಕ : : ಸಂಖ್ಯಾವಾಚಕ :

ಉತ್ತರ : ____________________

4 ವ್ಯಾಪಾರಿ : ಅನ್ವರ್ಥನಾಮ : : ಶಾಲೆ :

ಉತ್ತರ : ____________________

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 2

# ಸಂಧಿಗಳು

Z8Q6K3
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ಸಂಧಿಗಳನ್ನು ಗುರುತಿಸಿ, ಬಿಡಿಸಿ ಬರೆದು ಸಂಧಿಯ ವಿಧವನ್ನು ತಿಳಿಯುವರು.

### ಸಂಧಿ ಪರಿಚಯಾತ್ಮಕ ವಿವರ :

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಅರ್ಥಕ್ಕೆ ಲೋಪ ಬರದಂತೆ ಕೂಡಿಕೊಳ್ಳುವುದಕ್ಕೆ ಸಂಧಿ ಎನ್ನುವರು.

| ಸಂಧಿಗಳಲ್ಲಿ ಎರಡು ವಿಧಗಳಿವೆ | |
|---|---|
| ಕನ್ನಡಸಂಧಿ | ಸಂಸ್ಕೃತಸಂಧಿ. |

### ಸಂಸ್ಕೃತದ ಸ್ವರ ಸಂಧಿಗಳು

| | | | |
|---|---|---|---|
| **ಸವರ್ಣದೀರ್ಘಸಂಧಿ** | **ಗುಣಸಂಧಿ** | **ವೃದ್ಧಿಸಂಧಿ** | **ಯಣ್ ಸಂಧಿ** |

| **ಸಂಸ್ಕೃತದ ವ್ಯಂಜನ ಸಂಧಿಗಳು** | | |
|---|---|---|
| **ಜಶ್ತ್ವಸಂಧಿ** | **ಶ್ಚುತ್ವಸಂಧಿ** | **ಅನುನಾಸಿಕ ಸಂಧಿ** |

@KTBS NOT TO BE REPUBLISHED

**ಚಟುವಟಿಕೆ 1** : ಸಂಧಿಗಳ ವ್ಯಾಖ್ಯಾನವನ್ನು ಓದಿಕೊಂಡು ಪದಗಳನ್ನು ಬಿಡಿಸಿ ಬರೆಯಿರಿ.

**ಸಂಧಿಸವರ್ಣದೀರ್ಘ ಸಂಧಿ:–** ಸಂಧಿಯಾಗುವಾಗ ಪೂರ್ವಪದರ ಕೊನೆಯ ಸ್ವರಗಳಾದ ಅ, ಆ ಕಾರಗಳ ಮುಂದೆ ಅ, ಆ ಕಾರ ಬಂದಾಗ 'ಆ' ಕಾರವು, ಇ, ಈ ಕಾರಗಳ ಮುಂದೆ ಇ, ಈ ಕಾರಗಳು ಬಂದಾಗ 'ಈ' ಕಾರವು, ಉ, ಊ ಕಾರಗಳ ಮುಂದೆ ಉ, ಊ ಕಾರವು ಬಂದಾಗ 'ಊ' ಕಾರವು ಬಂದರೆ ಅದು ಸವರ್ಣದೀರ್ಘಸಂಧಿ.

| | |
|---|---|
| ಅ ಆ + ಅ ಆ = ಆ | ದೇವ + ಆಲಯ = ದೇವಾಲಯ |
| ಇ ಈ + ಇ ಈ = ಈ | ಗಿರಿ+ ಈಶ = ಗಿರೀಶ |
| ಉ ಊ + ಉ ಊ = ಊ | ಗುರು + ಉಪದೇಶ = ಗುರೂಪದೇಶ |
| **ಈ ಪದಗಳನ್ನು ಬಿಡಿಸಿ ಬರೆದು ಅಭ್ಯಾಸ ಮಾಡಿರಿ** | |
| ಗ್ರಂಥಾಲಯ | |
| ಗೌರೀಶ | |
| ವಧೂಪೇತ | |
| ಮಹಾತ್ಮ | |

**ಗುಣಸಂಧಿ:** ಪೂರ್ವಪದ ಅಂತ್ಯದಲ್ಲಿರುವ ಅ,ಆ ಕಾರಕ್ಕೆ ಉತ್ತರಪದದ ಆದಿಯಲ್ಲಿ ಇ,ಈ ಕಾರಗಳು ಬಂದಾಗ ಏ' ಕಾರವೂ, ಉ ಊ ಕಾರಗಳು ಬಂದಾಗ 'ಓ' ಕಾರವೂ, ಋ ಕಾರವು ಬಂದಾಗ 'ಅರ್' ಕಾರವು ಬಂದು ಸಂಧಿಯಾದರೆ ಅದು ಗುಣಸಂಧಿ.

| | |
|---|---|
| ಅ ಆ + ಇ ಈ = ಏ | ಗಣ + ಈಶ = ಗಣೇಶ |
| ಅ ಆ + ಉ ಊ = ಓ | ಸೂರ್ಯ + ಉದಯ = ಸೂರ್ಯೋದಯ |
| ಅ ಆ + ಋ = ಆರ್ | ಮಹಾ +ಋಷಿ = ಮಹರ್ಷಿ |
| **ಪದಗಳನ್ನು ಬಿಡಿಸಿ ಬರೆದು ಅಭ್ಯಾಸ ಮಾಡಿರಿ :** | |
| ಚಂದ್ರೋದಯ | |
| ಮಂಡಲೇಶ್ವರ | |
| ದೇವರ್ಷಿ | |
| ವಂಶೋದ್ಧಾರಕ | |

**ವೃದ್ಧಿಸಂಧಿ:** ಪೂರ್ವಪದದ ಕೊನೆಯಲ್ಲಿರುವ ಅ, ಆ ಕಾರಗಳಿಗೆ ಏ, ಐ ಕಾರವೂ ಬಂದಾಗ 'ಐ' ಕಾರವೂ, ಅ ಆ ಕಾರಗಳಿಗೆ ಓ ಔ ಕಾರಗಳು ಬಂದಾಗ ಔ ಕಾರವು ಬಂದು ಸಂಧಿಯಾದರೆ ಅದು ವೃದ್ಧಿಸಂಧಿ.

NOT TO BE REPUBLISHED ©KTBS

| | |
|---|---|
| ಅ ಆ + ಏ ಐ = ಐ | ಲೋಕ + ಏಕ = ಲೋಕೈಕ |
| ಅ ಆ + ಓ ಔ = ಔ | ಜಲ + ಓಘ = ಜಲೌಘ |
| **ಪದಗಳನ್ನು ಬಿಡಿಸಿ ಬರೆದು ಅಭ್ಯಾಸ ಮಾಡಿರಿ :** | |
| ದಿವ್ಯೌಷಧ | |
| ಮಹೌದಾರ್ಯ | |
| ಭಾವೈಕ್ಯ | |
| ಮಹೌನ್ನತ್ಯ | |

ಯಣ್ ಸಂಧಿ: ಪೂರ್ವಪದದ ಅಂತ್ಯದಲ್ಲಿರುವ ಇ/ಈ ಕಾರಕ್ಕೆ ಸವರ್ಣವಲ್ಲದ ಸ್ವರಗಳು ಬಂದಾಗ 'ಯ್' ಕಾರವೂ ಉ/ಊ ಕಾರಕ್ಕೆ ಸವರ್ಣವಲ್ಲದ ಸ್ವರಗಳು ಬಂದಾಗ 'ವ್' ಕಾರವೂ 'ಋ' ಕಾರಕ್ಕೆ ಸವರ್ಣವಲ್ಲದ ಸ್ವರಗಳು ಬಂದಾಗ 'ರ್' ಕಾರವು ಬಂದು ಸಂಧಿಯಾದರೆ ಅದು ಯಣ್ ಸಂಧಿ.

| | |
|---|---|
| ಇ ಈ + ಅ ಆ = ಯ್ | ಅತಿ + ಅಂತ = ಅತ್ಯಂತ |
| ಉ ಊ + ಅ ಆ = ವ್ | ಗುರು + ಅಜ್ಞೆ = ಗುರ್ವಾಜ್ಞೆ |
| ಋ + ಅ ಆ = ರ್ | ಪಿತೃ + ಆರ್ಜಿತ = ಪಿತ್ರಾರ್ಜಿತ |
| **ಪದಗಳನ್ನು ಬಿಡಿಸಿ ಬರೆದು ಅಭ್ಯಾಸ ಮಾಡಿರಿ :** | |
| ಗತ್ಯಂತರ | |
| ಜಾತ್ಯಾತೀತ | |
| ಅಧ್ಯಾತ್ಮ | |
| ಅತ್ಯವಸರ | |

@KTBS NOT TO BE REPUBLISHED

**ಚಟುವಟಿಕೆ 2** : ಮಾದರಿಯಂತೆ ಕೊಟ್ಟಿರುವ ಸಂಧಿ ಪದಗಳನ್ನು ಬಿಡಿಸಿ ಬರೆಯಿರಿ.

ಮಾದರಿ : ಮಹರ್ಷಿ : ಮಹಾ + ಋಷಿ

1. ಬೆಟ್ಟದಾವರೆ : ____________ + ____________

2. ಜಗಜ್ಯೋತಿ : ____________ + ____________

3. ಅತ್ಯಂತ : ____________ + ____________

4. ಷಣ್ಮುಖ : ____________ + ____________

5. ಮೃಗಾಲಯ : ____________ + ____________

**ಚಟುವಟಿಕೆ 3** : ಕೊಟ್ಟಿರುವ ವಾಕ್ಯಗಳಲ್ಲಿರುವ ಸಂಧಿಪದಗಳನ್ನು ಗುರುತಿಸಿ, ಬಿಡಿಸಿ ಬರೆದು, ಸಂಧಿ ಹೆಸರಿಸಿ.

| ಸರಳವಾಕ್ಯ | ಸಂಧಿಪದ | ಬಿಡಿಸಿಬರೆದಾಗ | ಸಂಧಿಯಹೆಸರು |
|---|---|---|---|
| ದೇವಾಲಯಕ್ಕೆ ಹೋಗೋಣ. | ದೇವಾಲಯ | ದೇವ+ಆಲಯ | ಸವರ್ಣ ದೀರ್ಘ ಸಂಧಿ |
| ಸೂರ್ಯೋದಯ ನೋಡಲು ಚೆಂದ. | | | |
| ಅಶೋಕ ಲೋಕೈಕ ವೀರನಾಗಿದ್ದನು | | | |
| ಕುಬೇರನು ಅಷ್ಟೈಶ್ವರ್ಯ ಹೊಂದಿದ್ದನು | | | |
| **ಸರಳವಾಕ್ಯ** | **ಸಂಧಿಪದ** | **ಬಿಡಿಸಿಬರೆದಾಗ** | **ಸಂಧಿಯಹೆಸರು** |
| ಇವಳು ಪಿತ್ರಾರ್ಜಿತ ಆಸ್ತಿಗೆ ಒಡತಿ | | | |
| ಷಣ್ಮುಖನನ್ನು ಷಡಾನನ ಎಂತಲೂ ಕರೆಯುವರು. | | | |
| ಗುರುಗಳಿಗೆ ಸನ್ಮಾನ ಮಾಡಿದರು. | | | |
| ನಮಗೆ ಮನಶ್ಚಂಚಲವಿರಬಾರದು | | | |

NOT TO BE REPUBLISHED @KTBS

**ಚಟುವಟಿಕೆ 4** : ಅ ಪಟ್ಟಿಯೊಂದಿಗೆ ಬ ಪಟ್ಟಿಯನ್ನು ಹೊಂದಿಸಿ ಬರೆಯಿರಿ.

| ಅ ಪಟ್ಟಿ | ಸರಿ ಉತ್ತರಗಳು | ಬ ಪಟ್ಟಿ |
|---|---|---|
| ಅತ್ಯಂತ | | ಆಗಮಸಂಧಿ |
| ಲೋಕೈಕ | | ಲೋಪಸಂಧಿ |
| ಮರೆಯಾಗು | | ಗುಣಸಂದಿ |
| ಚಂದ್ರೋದಯ | | ವೃದ್ಧಿಸಂದಿ |
| ನಾವೆಲ್ಲಾ | | ಯಣ್ ಸಂಧಿ |

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 3

## ದ್ವಿರುಕ್ತಿ – ಅನುಕರಣಾವ್ಯಯ – ಜೋಡುನುಡಿ

D3S7Z1
ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿದ್ಯಾರ್ಥಿಗಳು ದ್ವಿರುಕ್ತಿ, ಅನುಕರಣಾವ್ಯಯ ಮತ್ತು ಜೋಡುನುಡಿಗಳನ್ನು ಗುರುತಿಸಲು ಹಾಗೂ ತಮ್ಮದೇ ಆದ ಉದಾಹರಣೆಗಳೊಂದಿಗೆ ಬಳಸುವರು.

### ಮಾಹಿತಿ ತಿಳಿಯೋಣ

1. **ದ್ವಿರುಕ್ತಿ :** ಒಂದು ವಿಶೇಷ ಅರ್ಥವ್ಯಕ್ತಪಡಿಸುವುದಕ್ಕೆ ಒಂದು ಪದ ಅಥವಾ ವಾಕ್ಯವನ್ನು ಎರಡು ಬಾರಿ ಉಚ್ಚರಿಸುವ ಶಬ್ಧಗಳು ದ್ವಿರುಕ್ತಿ.
2. **ಜೋಡುನುಡಿ :** ಭಾಷೆಯನ್ನು ಬಳಸುವಾಗ ಒಂದರ ಜೊತೆ ಮತ್ತೊಂದು ಬೇರೆ ಪದವು ರೂಢಿಗತವಾಗಿ ಬಂದರೆ ಜೋಡುನುಡಿ.
